ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ16-09-2025 ರಂದು ಬೊಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಜಿ ಎಚ್ ವಕೀಲರಿಂದಃ

ಪ್ರತಿವಾದಿಗಳು ನಮ್ಮ ಊರಿನವರು. ನನ್ನ ಮನೆಯಿಂದ ಪ್ರತಿವಾದಿಗಳ ಮನೆ 120 ಅಡಿ ಅಂತರದಲ್ಲಿ ಇರುತ್ತದೆ. ಪ್ರತಿವಾದಿಗಳು ನಮ್ಮ ಊರಿನಲ್ಲಿ ಸುಮಾರು 25-30 ವರ್ಷಗಳಿಂದ ವಾಸ್ತವ್ಯಮಾಡಿಕೊಂಡು ಬರುತ್ತಿದ್ದಾರೆ. ನಮ್ಮ ಮೂಲ ಕುಟುಂಬದವರು 1950 ರಿಂದ ವಾಸವಿರುತ್ತೇವೆ. ಪ್ರತಿವಾದಿಗಳು ನಮ್ಮ ಊರಿಗೆ 25-30 ವರ್ಷಗಳ ಹಿಂದೆ ವಲಸೆ ಬಂದು ವಾಸವಿರುತ್ತಾರೆ.

2. ಈ ದಾವೆಯನ್ನು ನನ್ನ ತಾಯಿ ದಾಖಲಿಸಿರುತ್ತಾರೆ. ಈ ದಾವೆಯನ್ನು ಸಲ್ಲಿಸಲು ನಾನು ಮತ್ತು ನನ್ನ ತಾಯಿ ವಕೀಲರಿಗೆ ಮಾಹಿತಿ ನೀಡಿರುತ್ತೇವೆ. ನಾವು ವಾಸದಲ್ಲಿರುವ ಮನೆ ಸರ್ವೆ 104/2 ರಲ್ಲಿ ಬರುತ್ತದೆ. ಪ್ರತಿವಾದಿಗಳು ವಾಸವಿರುವ ಮನೆ ಸರ್ವೆ ನಂ 104/1 ರಲ್ಲಿ ಬರುತ್ತದೆ. ಸದರಿ ಸರ್ವೆ ನಂ 104 ಯಾವ ವರ್ಷದಲ್ಲಿ ಪೊಡಿ ಆಗಿರುತ್ತದೆ? ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಸರ್ವೆ ನಂ 104 ಪೋಡಿ ಆಗುವ ಆಸ್ತಿ ಆಗಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸರ್ವೆ ನಂ 104/1 ಮತ್ತು 104/2 ರಲ್ಲಿ ಕೊರ್ಟ ಮೂಲಕ ಸರ್ವೆ ಆಗಿರುತ್ತದೆ.

3. ಈ ದಾವೆ ಸಲ್ಲಿಸುವ ಕಾಲಕ್ಕೆ ದಾವೆಯ ಜೊತೆ ಸಲ್ಲಿಸಿರುವ ಹಾತ ನಕಾಶೆಯನ್ನು ತಯಾರಿಸಲು ನನ್ನ ವಕೀಲರಿಗೆ ನಾನು ಮತ್ತು ನನ್ನ ತಾಯಿ ಮಾಹಿತಿ ನೀಡಿರುತ್ತೇವೆ. ಸದರಿ ಹಾತ ನಕಾಶೆಯಲ್ಲಿ ನನ್ನ ಹಾಗೂ ನನ್ನ ತಾಯಿಯದಾಗಲಿ ಸಹಿ ಇಲ್ಲ ಎಂದರೆ ಸರಿ. ಸದರಿ ಹಾತ ನಕಾಶೆಯಲ್ಲಿ A,X ಮತ್ತು B ವರೆಗೆ ಎಷ್ಟು ಉದ್ದ ಆಗಲ ಇರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ನಾವು ಮಾಹಿತಿ ನೀಡಿರುತ್ತೇವೆ ಎಂದು ಉತ್ತರಿಸುತ್ತಾರೆ. ಸದರಿ ಹಾತ ನಕಾಶೆಯಲ್ಲಿ ಸರ್ವೆ ನಂ 104/1 ಮತ್ತು 104/2 ಎಲ್ಲಿ ಬರುತ್ತದೆ ಎಂಬ ಬಗ್ಗೆ ನಾನು ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಸದರಿ ಹಾತ ನಕಾಶೆಯಲ್ಲಿ ಸರ್ವೆ ನಂ 104/1 ಮತ್ತು 104/2 ರ ಚರ್ತುಗಡಿಯ ಬಗ್ಗೆ ನಾನೇ ಮಾಹಿತಿ ನೀಡಿರುತ್ತೇನೆ. ಸದರಿ ಹಾತ ನಕಾಶೆಗೆ ಮಾಹಿತಿಯನ್ನು ಕಂದಾಯ ಇಲಾಖೆಯ ನಕಾಶೆಯ ಆಧಾರದ ಮೇಲೆ ನೀಡಿರುತ್ತೇನೆ. ಸದರಿ ಕಂದಾಯ ಇಲಾಖೆಯವರು ನೀಡಿರುವ ನಕಾಶೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ಕಂದಾಯ ಇಲಾಖೆಯವರು ನೀಡಿರುವ ನಕಾಶೆಯನ್ನು ನೋಡಿರುತ್ತೇನೆ. ಸದರಿ ಕಂದಾಯ ಇಲಾಖೆಯವರು ನೀಡಿರುವ ನಕಾಶೆಯಲ್ಲಿ ದಾವಾ ರಸ್ತೆ ಇರುತ್ತದೆ. ಸದರಿ ಕಂದಾಯ

ಇಲಾಖೆಯವರು ನೀಡಿರುವ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ದಾವಾಸ್ತಿಗೆ ಸಂಬಂದಿಸಿದಂತೆ ಗ್ರಾಮ ಪಂಚಾಯತದಲ್ಲಿ ಇರುವ ದಾಖಲೆಗಳನ್ನು ನಾನು ನೋಡಿರುತ್ತೇನೆ. ನನ್ನ ಹಾತ ನಕಾಶೆಯಲ್ಲಿ ತೋರಿಸಿರುವ A point ನಲ್ಲಿ ಗ್ರಾಮ ಪಂಚಾಯತರವರು ಪೈಪ್ ಗಳನ್ನು ಅಳವಡಿಸಿರುತ್ತಾರೆ. ಆ ಬಗ್ಗೆ ದಾಖಲೆಯನ್ನು ನಾನು ಗ್ರಾಮ ಪಂಚಾಯತದಿಂದ ಪಡೆದಿರುತ್ತೇನೆ. ಸದರಿ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

4. ದಾವಾ ರಸ್ತೆಗೆ ಸಂಬಂದಿಸಿದಂತೆ ಗ್ರಾಮ ಪಂಚಾಯತದಿಂದ ಪಡೆದ ದಾಖಲೆಗಳನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಾವಾ ರಸ್ತೆಗೆ ಸಂಬಂದಿಸಿದಂತೆ ಅಬಿವೃದ್ಧಿ ಪಡಿಸಿದ ಬಗ್ಗೆ ಅನುಧಾನಕ್ಕೆ ಸಂಬಂದಿಸಿದಂತೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಾವಾ ರಸ್ತೆ ನನ್ನ ಹಾತ ನಕಾಶೆಯಲ್ಲಿ ತೋರಿಸಿದಂತೆ ನೇರವಾಗಿ ಇರುತ್ತದೆ. ಸದರಿ ಹಾತ ನಕಾಶೆಯಲ್ಲಿ ಪ್ರತಿವಾದಿಯರ ಮನೆಯನ್ನು ತೋರಿಸಿಲ್ಲ. ಸದರಿ ಹಾತ ನಕಾಶೆಯಲ್ಲಿ ನಮ್ಮ ಮನೆಯನ್ನು ತೋರಿಸಿರುತ್ತೇನೆ. ದಾವಾ ರಸ್ತೆಗೆ ಸಂಬಂದಿಸಿದಂತೆ ವಸ್ತುಸ್ಥಿತಿಯನ್ನು ತಿಳಿದುಕೊಂಡು ಬರಲು ಕಮಿಷನರ್ ನ್ನು ನಿವೇದಿಸುವಂತೆ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನ್ಯಾಯಾಲಯದ ನಿಯೋಗಿ ದಾವಾ ರಸ್ತೆಗೆ ಸಂಬಂದಿಸಿದಂತೆ ಸ್ಥಳ ಪರಿಶೀಲನೆಗೆ ಬಂದಾಗ ನಾನು ಸದರಿ ಸ್ಥಳದಲ್ಲಿ ಇದ್ದೆನು.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**